28/07/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ಪಾವನರಾಗುವುದಕ್ಕಾಗಿ ತಮ್ಮ ಸ್ವಧರ್ಮದಲ್ಲಿರಿ ಮತ್ತು ಅಶರೀರಿಯಾಗಿ ಒಬ್ಬ ತಂದೆಯನ್ನು ನೆನಪು ಮಾಡಿ"

ಪ್ರಶ್ನೆ: ಯಾವ ವಿಧಿಯಿಂದ ಹೊಸ ವಿದ್ಯಾರ್ಥಿಗಳ ಮೇಲೆ ಜ್ಞಾನದ ಬಾಣವು ನಾಟುತ್ತದೆ?

ಉತ್ತರ: ಅವರನ್ನು ಮೊಟ್ಟಮೊದಲು 7 ದಿನದ ಭಟ್ಟಿಯಲ್ಲಿ ಕೂರಿಸಿ. ಇದು ನಿಯಮವಾಗಿದೆ- ಯಾವಾಗ ಯಾರೇ ಬಂದರು ಅವರಿಂದ ಫಾರ್ಮ್ನ್ನು ತುಂಬಿಸಿ. ಮೊದಲು 7 ದಿನಗಳ ಭಟ್ಟಿಯಲ್ಲಿ ಕೂರಿಸಬೇಕು. ನೀವು ಭ್ರಮರಿಗಳು ಜ್ಞಾನದ ಧ್ವನಿ ಮಾಡಿ ತಮ್ಮ ಸಮಾನರನ್ನಾಗಿ ಮಾಡಿಕೊಳ್ಳುತ್ತೀರಿ. ನಿಮಗೆ ಗೊತ್ತಿದೆ- ಈಗ ದೇವತಾ ಧರ್ಮದ ಸಸಿಯು ನೆಡಲ್ಪಡುತ್ತಿದೆ. ಯಾರು ಈ ಮನೆತನದ ಆತ್ಮಗಳಿರುತ್ತಾರೆಯೋ ಅವರು ಮಹಾರೋಗಿಗಳಿಂದ ನಿರೋಗಿಗಳಾಗುವ ಪುರುಷಾರ್ಥದಲ್ಲಿ ತೊಡಗಿಬಿಡುತ್ತಾರೆ.

ಗೀತೆ: ಸಭೆಯಲ್ಲಿ ಜ್ಯೋತಿ ಬೆಳಗಿತು.............

ಓಂ ಶಾಂತಿ. ಮಕ್ಕಳಿಗೆ ಓಂಶಾಂತಿಯ ಅರ್ಥವನ್ನಂತೂ ತಿಳಿಸಲಾಗಿದೆ. ಓಂ ಎಂದರೆ ಅಹಂ ಅರ್ಥಾತ್ ನಾನು. ನಾನು ಯಾರು? ಆತ್ಮ ಮತ್ತು ನನ್ನ ಶರೀರದ ಕರ್ಮೇಂದ್ರಿಯಗಳು. ಆತ್ಮನ ಸ್ವಧರ್ಮವೇ ಶಾಂತಿಯಾಗಿದೆ. ಆತ್ಮವು ಯಾರ ಸಂತಾನನಾಗಿದೆ? ಪರಮಪಿತ ಪರಮಾತ್ಮನ ಸಂತಾನನಾಗಿದೆ ಎಂದು ಹೇಳುತ್ತಾರೆ. ಅವರೂ ಸಹ ಶಾಂತಿಯ ಸಾಗರನಾಗಿದ್ದಾರೆ. ಆತ್ಮಗಳು ಶಾಂತಿಯ ಪ್ರಪಂಚವಾದ ಶಾಂತಿಧಾಮದಲ್ಲಿರುತ್ತಾರೆ ನಂತರ ಪಾತ್ರಾವನ್ನು ಅಭಿನಯಿಸಲು ಶಬ್ದದ ಪ್ರಪಂಚಕ್ಕೆ ಬರುತ್ತಾರೆ. ಈಗ ಬೇಹದ್ದಿನ ತಂದೆಯು ತಿಳಿಸುತ್ತಾರೆ- ಹೇ ಮಕ್ಕಳೇ, ತಮ್ಮ ಸ್ವಧರ್ಮದಲ್ಲಿ ಸ್ಥಿತರಾಗಿ. ಅಶರೀರಿಯಾಗಿ ಕುಳಿತುಕೊಳ್ಳಿ. ತಂದೆಯನ್ನು ನೆನಪು ಮಾಡಿ. ಆ ತಂದೆಯನ್ನು ಜ್ಯೋತಿಯೆಂತಲೂ ಹೇಳುತ್ತಾರೆ. ಈಗ ಈ ಸಭೆಯು ಪತಿತ ಮನುಷ್ಯರದ್ದಾಗಿದೆ, ಈ ಸಮಯದಲ್ಲಿ ಇದು ಪತಿತ ಪ್ರಪಂಚವಾಗಿದೆ. ಮನುಷ್ಯ ಮಾತ್ರರೆಲ್ಲರೂ ಪತಿತರಾಗಿದ್ದಾರೆ. ತಿಳಿಸಲಾಗಿದೆ- ಸತ್ಯಯುಗದಲ್ಲಿ ಭಾರತವು ಪಾವನವಾಗಿತ್ತು, ಗೃಹಸ್ಥ ಧರ್ಮವೆಂದು ಹೇಳಲಾಗುತ್ತದೆ. ಇದನ್ನು ಸುಖಧಾಮವೆಂತಲೂ ಹೇಳಲಾಗುತ್ತದೆ. ಭಾರತವು ಪಾವನವಾಗಿತ್ತು ಈಗ ಪತಿತವಾಗಿದೆ, ದುಃಖಧಾಮವಾಗಿದೆ. ಈ ಚಕ್ರವು ಸುತ್ತುತ್ತಾ ಇರುತ್ತದೆ. ಈಗ ಇದು ಕಲ್ಯಾಣಕಾರಿ ಸಂಗಮಯುಗವಾಗಿದೆ. ಯಾವಾಗ ಪತಿತ ಸೃಷ್ಟಿಯಲ್ಲಿ ಪತಿತ ಮನುಷ್ಯ ಸೃಷ್ಟಿಯನ್ನು ಪಾವನ ಮಾಡಲು ತಂದೆಯು ಬರಬೇಕಾಗುತ್ತದೆ. ಹಳೆಯ ಪ್ರಪಂಚದಿಂದ ಹೊಸ ಪ್ರಪಂಚವನ್ನಾಗಿ ರಚಯಿತ ತಂದೆಯೇ ಮಾಡುತ್ತಾರೆ. ಇವರನ್ನೇ ಪರಮಪಿತ ಪರಮಾತ್ಮನೆಂದು ಹೇಳಲಾಗುತ್ತದೆ. ಎಲ್ಲಾ ಭಕ್ತರ ಭಗವಂತ ಒಬ್ಬರೇ ಆಗಿದ್ದಾರೆ ಅಂದಾಗ ತಂದೆಯು ತಿಳಿಸುತ್ತಾರೆ- ನಾನೂ ಸಹ ಪತಿತಪ್ರಪಂಚ, ಪತಿತ ಶರೀರದಲ್ಲಿ ಬರಬೇಕಾಗುತ್ತದೆ. ಭಾರತವನ್ನು ಪಾವನ, ದೈವೀರಾಜ್ಯವನ್ನಾಗಿ ಮಾಡಲು ಪರಮಧಾಮದಿಂದ ಒಂದೇಬಾರಿ ಬರುತ್ತೇನೆ. ಈ ಪ್ರಪಂಚದ ಇತಿಹಾಸ-ಭೂಗೋಳವನ್ನು ಯಾರೂ ತಿಳಿದುಕೊಂಡಿಲ್ಲ ಏಕೆಂದರೆ ನಾಸ್ತಿಕರಾಗಿದ್ದಾರೆ. ಒಬ್ಬರೂ ಸಹ ಆಸ್ತಿಕ ಮನುಷ್ಯರಿಲ್ಲ. ತಂದೆಯನ್ನು ಅರಿತುಕೊಳ್ಳದಿರುವ ಕಾರಣ ನಿರ್ಧನಿಕರಾಗಿಬಿಟ್ಟಿದ್ದಾರೆ. ಪರಸ್ಪರ ಜಗಳವಾಡುತ್ತಾ, ಹೊಡೆದಾಡುತ್ತಿರುತ್ತಾರೆ. ಮನೆ-ಮನೆಯಲ್ಲಿ ಎಷ್ಟೊಂದು ಅಶಾಂತಿಯಿದೆ! ಸತ್ಯಯುಗದ ಆದಿಯಲ್ಲಿ ಏಕಚಕ್ರಾಧಿಪತ್ಯ ದೇವಿ-ದೇವತಾ ರಾಜ್ಯವಿತ್ತು. ಸುಖಧಾಮವಾಗಿತ್ತು ನಂತರ ದುಃಖಧಾಮ ಹೇಗಾಯಿತು ಎಂದು ಯಾರೂ ತಿಳಿದುಕೊಂಡಿಲ್ಲ.

ಜ್ಞಾನವು ಬ್ರಹ್ಮನ ಹಗಲಾಗಿದೆ, ಭಕ್ತಿಯು ಬ್ರಹ್ಮನ ರಾತ್ರಿಯಾಗಿದೆ. ಸನ್ಯಾಸಿಗಳು ಜ್ಞಾನ, ಭಕ್ತಿ, ವೈರಾಗ್ಯವೆಂದು ಹೇಳುತ್ತಾರೆ. ಅವರಂತೂ ಮನೆ-ಮಠವನ್ನು ಬಿಟ್ಟು ಕಾಡಿಗೆ ಹೊರಟುಹೋಗುತ್ತಾರೆ. ವೈರಾಗ್ಯವು ಬಂದುಬಿಡುತ್ತದೆ. ಅದು ರಜೋಗುಣಿ ಸನ್ಯಾಸವಾಗಿದೆ, ಇದು ಸತೋಪ್ರಧಾನ ಸನ್ಯಾಸವಾಗಿದೆ. ಈ ಪಾಪಾತ್ಮರ ಪ್ರಪಂಚದಲ್ಲಿ ಒಬ್ಬರೂ ಪುಣ್ಯಾತ್ಮರಿಲ್ಲ ಅಂದಾಗ ಈ ಆಟವೆಲ್ಲವೂ ಭಾರತದಲ್ಲಿದೆ. ಭಾರತವು ಚಿನ್ನದ ಪಕ್ಷಿಯಾಗಿತ್ತು ಮತ್ತು ಇದೇ ಭಾರತದಲ್ಲಿ ಅಪಾರ ವಜ್ರರತ್ನಗಳಿದ್ದವು. ಚಿನ್ನದ ಮಹಲುಗಳಿದ್ದವು ಮತ್ತು ಅವು ವಜ್ರರತ್ನಗಳಿಂದ ಪೋಣಿಸಲ್ಪಟ್ಟಿತ್ತು. ಈಗಂತೂ ಭಾರತವು ಕವಡೆಯ ಸಮಾನವಾಗಿಬಿಟ್ಟಿದೆ. ಪುನಃ ಅದನ್ನು ವಜ್ರಸಮಾನವನ್ನಾಗಿ ತಂದೆಯೇ ಮಾಡುತ್ತಾರೆ. ನಿಮಗೆ ಗೊತ್ತಿದೆ- ನಾವು ಮನುಷ್ಯರಿಂದ ದೇವತೆಗಳಾಗುತ್ತಿದ್ದೇವೆ. ಈಗ ಆ ತಂದೆಯು ಪತಿತರ ಸಭೆಯಲ್ಲಿ ಬಂದಿದ್ದಾರೆ. ಮನುಷ್ಯರು ಪತಿತ-ಪಾವನಿ ಗಂಗೆಯೆಂದು ತಿಳಿಯುತ್ತಾರೆ, ಸ್ನಾನ ಮಾಡಲು ಹೋಗುತ್ತಾರೆ ಆದರೂ ಸಹ ಯಾರೂ ಪಾಪಾತ್ಮರಿಂದ ಪುಣ್ಯಾತ್ಮರಾಗುವುದಿಲ್ಲ. ಪ್ರತೀ ವರ್ಷವೂ ಹೋಗಿ ಗಂಗಾಸ್ನಾನ ಮಾಡುತ್ತಾರೆ, ಈ ಸಮಯದಲ್ಲಿ ಯಾರೂ ಪಾವನರಿಲ್ಲ. ಎಲ್ಲಿಯತನಕ ಪಾವನರನ್ನಾಗಿ ಮಾಡುವ ತಂದೆಯು ಬರುವುದಿಲ್ಲವೋ ಅಲ್ಲಿಯತನಕ ಪಾವನರಾಗಲು ಸಾಧ್ಯವಿಲ್ಲ. ಗೀತೆಯ ಭಗವಂತನೇ ಪಾವನರನ್ನಾಗಿ ಮಾಡುತ್ತಾರೆ. ಆ ಭಗವಂತನಂತೂ ಎಲ್ಲಾ ಆತ್ಮಗಳ ತಂದೆಯೊಬ್ಬರೇ ಆಗಿದ್ದಾರೆ. ಎಲ್ಲಾ ಭಕ್ತರೂ ಭಗವಂತನಾಗಿದ್ದಾರೆ ಅಥವಾ ಭಗವಂತನು ಸರ್ವವ್ಯಾಪಿಯಾಗಿದ್ದಾರೆ ಎಂದಲ್ಲ. ಈ ರೀತಿ ಹೇಳುವುದಾದರೆ ಭಗವಂತನ ನಿಂದನೆ ಮಾಡುತ್ತಾರೆ ಆದ್ದರಿಂದ

ಯಧಾ ಯಧಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ...... ಇದು ಭಾರತಕ್ಕಾಗಿ ಗಾಯನವಿದೆ. ಯಾವ ತಂದೆಯು ಬಂದು ಭಾರತವನ್ನು ವಜ್ರಸಮಾನರನ್ನಾಗಿ ಮಾಡುತ್ತಾರೆ ಅವರನ್ನು ಎಷ್ಟು ನಿಂದನೆ ಮಾಡುತ್ತಾರೆ. ಋಷಿ-ಮುನಿಗಳು ರಚಯಿತ ಮತ್ತು ರಚನೆಯು ಬೇಅಂತ್ ಆಗಿದೆ ಅಥವಾ ನೇತಿ-ನೇತಿ, ನಮಗೆ ಗೊತ್ತಿಲ್ಲವೆಂದು ಹೇಳುತ್ತಾ ಬಂದರು ಮತ್ತು ಇಂದಿನ ಮನುಷ್ಯರು ಭಗವಂತನನ್ನು ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ. ತಂದೆಯು ತಿಳಿಸುತ್ತಾರೆ- ಯಾವಾಗ ಮನುಷ್ಯರು ಇಂತಹವರಾಗಿಬಿಡುತ್ತಾರೆ ಆಗ ನಾನು ಬಂದು ಪಾಪಾತ್ಮರಿಂದ ಪುಣ್ಯಾತ್ಮ, ದೇವತೆಗಳನ್ನಾಗಿ ಮಾಡುತ್ತೇನೆ. ಎಲ್ಲರ ಸದ್ಗತಿದಾತ ಒಬ್ಬರೇ ಆಗಿದ್ದಾರೆ. ಅವರೇ ಬಂದು ಪತಿತರಿಂದ ಪಾವನ ಮಾಡಿ ಯೋಗ್ಯರನ್ನಾಗಿ ಮಾಡುತ್ತಾರೆ, ಮಕ್ಕಳಿಗೆ ಆಸ್ತಿಯನ್ನು ಕೊಡುತ್ತಾರೆ. ಲೌಕಿಕ ತಂದೆಯಿಂದ ಅಲ್ಪಕಾಲದ ಆಸ್ತಿಯು ಸಿಕ್ಕಿದೆ. ಬೇಹದ್ದಿನ ತಂದೆಯು ತಿಳಿಸುತ್ತಾರೆ- ನಾನು ನಿಮಗೆ 21 ಜನ್ಮಗಳಿಗಾಗಿ ಪವಿತ್ರತೆ, ಸುಖ-ಶಾಂತಿಯ ಆಸ್ತಿಯನ್ನು ಕೊಡುತ್ತೇನೆ. ಇದನ್ನು ಲೌಕಿಕ ತಂದೆಯು ಕೊಡಲು ಸಾಧ್ಯವಿಲ್ಲ. ಇವರು ತಂದೆಯೂ ಆಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ, ಜ್ಞಾನಸಾಗರನೂ ಆಗಿದ್ದಾರೆ. ತಂದೆಯ ಮಹಿಮೆಯು ತುಂಬಾ ಶ್ರೇಷ್ಠವಾಗಿದೆ. ಮನುಷ್ಯಸೃಷ್ಟಿಯ ಬೀಜರೂಪವೂ ಆಗಿದ್ದಾರೆ. ಇದು ಮನುಷ್ಯಸೃಷ್ಟಿಯ ವಿಭಿನ್ನ ಧರ್ಮಗಳ ವೃಕ್ಷವಾಗಿದೆ. ಆದಿಸನಾತನ ದೇವಿ-ದೇವತಾಧರ್ಮವು ಸತ್ಯಯುಗದ್ದಾಗಿದೆ. ಅದರಿಂದ ಮತ್ತೆಲ್ಲಾ ಧರ್ಮಗಳು ಕವಲೊಡೆಯುತ್ತವೆ. ಈಗ ನೀವು ಬ್ರಾಹ್ಮಣ ಧರ್ಮದವರಾಗಿದ್ದೀರಿ. ಇದಕ್ಕಿಂತ ಮೊದಲು ಶೂದ್ರಧರ್ಮದವರಾಗಿದ್ದಿರಿ. ಈಗ ಬ್ರಾಹ್ಮಣರಿಂದ ಮತ್ತೆ ದೇವತೆಗಳು ಸೋ ಕ್ಷತ್ರಿಯರಾಗುತ್ತೀರಿ. ಈ 84 ಜನ್ಮಗಳ ಚಕ್ರವನ್ನು ಸುತ್ತಬೇಕಾಗುತ್ತದೆ. ಸತ್ಯಯುಗದಲ್ಲಿಯೂ ಸಹ ಮೊಟ್ಟಮೊದಲು ನೀವು ಬರುತ್ತೀರಿ. ಗಾಯನವೂ ಇದೆ- ಆತ್ಮರು ಪರಮಾತ್ಮನಿಂದ ಬಹಳಕಾಲ ಅಗಲಿಹೋಗಿದ್ದರು... ಗೀತೆಯಲ್ಲಿಯೂ ಕೇಳಿದ್ದೀರಿ- ನಾಲ್ಕೂಕಡೆ ಸುತ್ತಿಬಂದರೂ ಸಹ ಭಗವಂತನಿಂದ ದೂರವೇ ಉಳಿದೆವು ಅರ್ಥಾತ್ ತಂದೆಯನ್ನು ಮಿಲನ ಮಾಡಲು ಆಗಲಿಲ್ಲ.

ಈಗ ಇದು ರಾವಣನ ರಾಜ್ಯವಾಗಿದೆ. ರಾಮರಾಜ್ಯವು ದೈವೀ ರಾಜ್ಯವಾಗಿದೆ. ಸ್ವರ್ಗ, ನರಕ ಇಲ್ಲಿಯೇ ಇದೆಯೆಂದು ಮನುಷ್ಯರು ತಿಳಿಯುತ್ತಾರೆ. ಆದರೆ ಈ ರೀತಿಯಿರಲು ಸಾಧ್ಯವಿಲ್ಲ. ಮನುಷ್ಯರು ಸತ್ತಾಗ ಸ್ವರ್ಗವಾಸಿಯಾದರೆಂದು ಹೇಳುತ್ತಾರೆಂದರೆ ಅವಶ್ಯವಾಗಿ ಅವರು ನರಕದಲ್ಲಿದ್ದರು ಅಂದಮೇಲೆ ಪುನರ್ಜನ್ಮವನ್ನೂ ಸಹ ನರಕದಲ್ಲಿಯೇ ತೆಗೆದುಕೊಳ್ಳಬೇಕಾಗುತ್ತದೆ. ಮನುಷ್ಯರದಂತೂ ಅನೇಕ ಮತಗಳಿವೆ. ಒಬ್ಬರು ಇನ್ನೊಬ್ಬರಿಗೆ ಹೋಲುವುದಿಲ್ಲ. ಅನೇಕ ಪ್ರಕಾರದ ದ್ವೈತ ಮತಗಳಿವೆ. ಅರ್ಧಕಲ್ಪ ಭಾರತದಲ್ಲಿ ದೈವೀ ಮತವಿರುತ್ತದೆ ಈಗ ಆಸುರೀಮತವಿದೆ. ಭಾರತವಾಸಿಗಳು ಯಾವ ಭಗವಂತನನ್ನು ನೆನಪು ಮಾಡುತ್ತಾರೊ ಆ ಪಾರಲೌಕಿಕ ತಂದೆಯನ್ನಂತೂ ಅರಿಯಬೇಕಲ್ಲವೆ. ಈಗಂತೂ ಭಾರತವು ಕವಡೆಯ ಸಮಾನವಾಗಿದೆ ಅದನ್ನು ವಜ್ರಸಮಾನ ಮಾಡಬೇಕಾಗಿದೆ. ಗಾಂಧೀಜಿ ಅಥವಾ ನೆಹರು ಭಾರತದಲ್ಲಿ ಏಕಚಕ್ರಾಧಿಪತ್ಯ, ರಾಮರಾಜ್ಯವು ಬೇಕೆಂದು ಬಯಸುತ್ತಿದ್ದರು. ಯಾವುದೋ ಸಮಯದಲ್ಲಿ ಭಾರತದಲ್ಲಿತ್ತು, ಈಗಿಲ್ಲ ಆದ್ದರಿಂದ ರಾಮರಾಜ್ಯವನ್ನು ತರುವ ಪ್ರಯತ್ನ ಪಡುತ್ತಾರೆಂದು ತಿಳಿಯುತ್ತಾರೆ ಆದರೆ ಇದು ಯಾವುದೇ ಮನುಷ್ಯರ ಕೈಯಲ್ಲಿಲ್ಲ. ನೀವು ಬ್ರಾಹ್ಮಣರಾಗಿದ್ದೀರಿ ಆಸ್ತಿಯು ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯರಿಗೇ ಇದೆ. ಬ್ರಹ್ಮಾರವರಿಗೂ ಸಹ ಶಿವತಂದೆಯಿಂದಲೇ ಆಸ್ತಿಯು ಸಿಗುತ್ತದೆ ಅಂದಾಗ ಇವರೂ ಸಹ ಸಹೋದರನಾದರು. ಮಕ್ಕಳೆಲ್ಲರೂ ಸಹೋದರ-ಸಹೋದರಿಯರೆಂದಮೇಲೆ ಅವಶ್ಯವಾಗಿ ಸರ್ವಆತ್ಮಗಳಿಗೂ ಒಬ್ಬರೇ ತಂದೆಯಾಗಿದ್ದಾರೆ. ಈಗ ನೀವು ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರು ಪರಸ್ಪರ ಸಹೋದರ-ಸಹೋದರಿಯರಾದಿರಿ. ನಿಮಗೆ ಆಸ್ತಿಯು ತಾತನಿಂದ ಸಿಗುತ್ತದೆ. ತಾತನ ಆಸ್ತಿಯ ಮೇಲೆ ಎಲ್ಲಾ ಆತ್ಮಗಳಿಗೂ ಹಕ್ಕು ಇದೆ. ಭಲೆ ಸ್ತ್ರೀ ಇರಬಹುದು, ಪುರುಷರ ಶರೀರದಲ್ಲಿಯೇ ಇರಬಹುದು. ಲೌಕಿಕ ತಾತನ ಆಸ್ತಿಯಂತೂ ಕೇವಲ ಮಕ್ಕಳಿಗಷ್ಟೇ ಸಿಗುತ್ತದೆ ಆದರೆ ಇವರಂತೂ ಬೇಹದ್ದಿನ ತಂದೆಯಲ್ಲವೆ. ಭಾರತವಾಸಿಗಳಿಗೆ ಸತ್ಯಯುಗ-ತ್ರೇತಾಯುಗದಲಿ ಬೇಹದ್ದಿನ ತಂದೆಯಿಂದ 21 ಜನ್ಮಗಳ ಬಹಳ ಸುಖವು ಸಿಕ್ಕಿದೆ. ನೀವು 84 ಜನ್ಮಗಳ ಚಕ್ರವನ್ನು ಈಗ ತಿಳಿದುಕೊಂಡಿದ್ದೀರಿ. ತಂದೆಯು ತಿಳಿಸುತ್ತಾರೆ- ನಾನು ನಿಮ್ಮೆಲ್ಲರನ್ನೂ ಕರೆದುಕೊಂಡು ಹೋಗಲು ಮಾರ್ಗದರ್ಶಕನಾಗಿ ಬಂದಿದ್ದೇನೆ. ನೀವೇ ಮೊಟ್ಟಮೊದಲು ಬಂದಿದ್ದಿರಿ, ಈಗ ಕೊನೆಯಲ್ಲಿಯೂ ನೀವೇ ಇದ್ದೀರಿ. ನಂತರ ಮೊಟ್ಟಮೊದಲು ನೀವೇ ಮನುಷ್ಯರಿಂದ ದೇವತೆಗಳಾಗುವವರಾಗಿದ್ದೀರಿ. ದೇವಿ-ದೇವತಾ ಧರ್ಮದವರೇ 84 ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ ನಂತರ ಎಲ್ಲರದು ಕಡಿಮೆ ಜನ್ಮಗಳಾಗುತ್ತವೆ. ಅನ್ಯಧರ್ಮದವರಿಗೆ ಅವಶ್ಯವಾಗಿ ಕಡಿಮೆ ಜನ್ಮಗಳಿರುತ್ತವೆ. ಈಗ ಆ ಆದಿಸನಾತನ ದೇವಿ-ದೇವತಾಧರ್ಮ ಇಲ್ಲ. ಪುನಃ ಸ್ಥಾಪನೆಯಾಗುತ್ತಾ ಇದೆ. ನಿಮಗೆ ಗೊತ್ತಿದೆ- ಇಬ್ರಾಹಿಂ ಪುನಃ ಯಾವಾಗ ಬರುತ್ತಾರೆ? ಕ್ರೈಸ್ತನು ಎಷ್ಟು ಸಮಯದ ನಂತರ ಬರುತ್ತಾರೆ? ಈ ಪ್ರಪಂಚದ ಇತಿಹಾಸ-ಭೂಗೋಳವನ್ನು ಮನುಷ್ಯರೇ ಅರಿತುಕೊಳ್ಳುವವರಲ್ಲವೆ. ತಂದೆಯು ತಿಳಿಸುತ್ತಾರೆ- ಯಾವಾಗ ಎಲ್ಲರೂ ಪಾಪಾತ್ಮರಾಗಿಬಿಡುತ್ತಾರೆ ಆಗ ನಾನು ಬಂದು ಪುಣ್ಯಾತ್ಮರನ್ನಾಗಿ ಮಾಡುತ್ತೇನೆ. ಯಾರು ಕಲ್ಪದ ಹಿಂದೆಯೂ ಸಹ ಆಗಿದ್ದರೋ ಅವರ ನಾಟಿಯನ್ನು ಮಾಡಿಸುತ್ತಿದ್ದೇನೆ. ಸತ್ಯಯುಗದಲ್ಲಿ ಇದ್ದದ್ದೇ ಒಂದು ಧರ್ಮ. ಈಗಂತೂ ಕಲಿಯುಗದಲ್ಲಿ ಅನೇಕ ಧರ್ಮಗಳಿವೆ. ಪತಿತ ಆತ್ಮರ ಸಭೆಯಾಗಿದೆ. ತಂದೆಯು ಎಲ್ಲರನ್ನು ಪಾವನ ಮಾಡಲು ಬರುತ್ತಾರೆ, ಸದ್ಗತಿ ನೀಡುವವರು ಅವರೊಬ್ಬರೇ ಆಗಿದ್ದಾರೆ. ಮಾಯಾ ರಾವಣನು ದುರ್ಗತಿ ಮಾಡುತ್ತಾನೆ ಆದ್ದರಿಂದ ದೇವತೆಗಳ ಮುಂದೆ ಹೋಗಿ ನಾನು ನಿರ್ಗುಣನಲ್ಲಿ ಯಾವುದೇ ಗುಣವಿಲ್ಲವೆಂದು ಹಾಡುತ್ತಾರೆ. ತಂದೆಯು ಬಂದು ಪತಿತರಿಂದ ಪಾವನರನ್ನಾಗಿ ಮಾಡಿ ದೈವೀಗುಣವಂತರನ್ನಾಗಿ ಮಾಡುತ್ತಾರೆ. ಈಗ ನೀವು ದೈವೀಗುಣವನ್ನು ಧಾರಣೆ ಮಾಡುತ್ತಾ ಹೋಗುತ್ತೀರಿ ನಂತರ ಭಾರತದಲ್ಲಿ ದೈವೀ ರಾಜ್ಯಗುಣವಂತರನ್ನಾಗಿ ಮಾಡುತ್ತಾರೆ. ಈಗ ನೀವು ದೈವೀಗುಣವನ್ನು ಧಾರಣೆ ಮಾಡುತ್ತಾ ಹೋಗುತ್ತೀರಿ ನಂತರ

ಭಾರತದಲ್ಲಿ ದೈವೀ ರಾಜ್ಯವಾಗಿಬಿಡುವುದು. ಈಗ ಈ ಪ್ರಪಂಚವು ಬದಲಾಗುತ್ತಿದೆ.

ನೀವು ಬೇಹದ್ದಿನ ಸನ್ಯಾಸಿಗಳಾಗಿದ್ದೀರಿ. ಅವರದು ಹದ್ದಿನ ವೈರಾಗ್ಯವಾಗಿದೆ. ಇದು ಬೇಹದ್ದಿನ ವೈರಾಗ್ಯವಾಗಿದೆ. ನೀವು ಇಡೀ ಹಳೆಯ ಸೃಷ್ಟಿಯನ್ನು ಮರೆತು ತಮ್ಮ ತಂದೆಯನ್ನು ನೆನಪು ಮಾಡಿ ಆಸ್ತಿಯನ್ನು ಪಡೆಯುತ್ತೀರಿ. ತಂದೆಯು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡುತ್ತೀರೆಂದರೆ ಆ ನೆನಪು ಅಥವಾ ಯೋಗಾಗ್ನಿಯಿಂದ ವಿಕರ್ಮ ವಿನಾಶವಾಗುತ್ತದೆ ನಂತರ ನೀವು ವಿಕರ್ಮಾಜೀತರಾಗುತ್ತೀರಿ. ತಂದೆಯು ತಿಳಿಸಿದ್ದಾರೆ- ಯಾವಾಗ ಯಾರೇ ನಾಲ್ಕೈದು ಜನರು ಒಟ್ಟಿಗೆ ಬಂದರೆ ಬೇರೆ-ಬೇರೆಯಾಗಿ ಫಾರ್ಮ್ನ್ನು ತುಂಬಿಸಿ ಅದರಿಂದ ಅವರು ಯಾವ ಧರ್ಮದವರೆಂದು ತಿಳಿಯುತ್ತದೆ. ಅನೇಕ ಧರ್ಮ, ಅನೇಕ ಮತಗಳಿದೆಯಲ್ಲವೆ. ದೇವಿ-ದೇವತಾ ಧರ್ಮದವರಿಗೇ ನಾಟುತ್ತದೆ. ಕರಾಚಿಯಲ್ಲಿ ಯಾವಾಗಲೂ ಬೇರೆ-ಬೇರೆಯಾಗಿಯೇ ತಿಳಿಸುತ್ತಿದ್ದೆವು, ಫಾರ್ಮನ್ನು ತುಂಬಿಸಿಕೊಳ್ಳುವ ನಿಯಮವೂ ಸಹ ಅವಶ್ಯವಾಗಿದೆ. 7 ದಿನಗಳ ಭಟ್ಟಿಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಏಕೆಂದರೆ ಮಹಾರೋಗಿಗಳಾಗಿದ್ದಾರೆ (ಭ್ರಮರಿಯ ತರಹ) ನೀವು ಮಕ್ಕಳು ಭ್ರಮರಿಗಳಾಗಿದ್ದೀರಿ. ಭೂ ಭೂ ಮಾಡಿ ನೀವು ತಮ್ಮ ಸಮಾನರನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ದೇವಿ-ದೇವತಾ ಧರ್ಮದವರ ಸಸಿಯ ನಾಟಿಯಾಗುತ್ತದೆ. ಮಕ್ಕಳು ಯುಕ್ತಿಗಳನ್ನು ಕಲಿಯಬೇಕಾಗಿದೆ. ತಿಳಿಸಿ- ಯಾವಾಗ 7 ದಿನಗಳು ಜ್ಞಾನವನ್ನು ತಿಳಿದುಕೊಳ್ಳುತ್ತೀರಿ ಆಗ ಎಲ್ಲಾ ಮಾತನಾಡಿಕ್ಕೊಳ್ಳುತ್ತಾರೆ ಮತ್ತು ನಿಮ್ಮ ಮೇಲೆ ಬಣ್ಣವೂ ಸಹ ಅಂಟುತ್ತದೆ. ನೀವೆಲ್ಲರೂ ಬ್ರಹ್ಮಾಕುಮಾರ-ಕುಮಾರಿಯರೆಂದು ಕರೆಸಿಕೊಳ್ಳುವಿರಲ್ಲವೆ. ಇಲ್ಲಿ ವಿಕಾರದೃಷ್ಟಿಯಂತೂ ಇರಲು ಸಾಧ್ಯವಿಲ್ಲ. ಇದು ರಾಜಯೋಗವಾಗಿದೆ, ಈಶ್ವರೀಯ ವಿಶ್ವವಿದ್ಯಾಲಯವಾಗಿದೆ. ಭಗವಾನುವಾಚ- ನಾನು ನಿಮ್ಮನ್ನು ರಾಜರಿಗೂ ರಾಜರನ್ನಾಗಿ ಮಾಡುತ್ತೇನೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿಕರ್ಮಾಜೀತರಾಗುವುದಕ್ಕಾಗಿ ಇಡೀ ಹಳೆಯ ಪ್ರಪಂಚದಿಂದ ಬೇಹದ್ದಿನ ವೈರಾಗ್ಯವನ್ನಿಟ್ಟುಕೊಂಡು ಎಲ್ಲವನ್ನೂ ಮರೆತು ಒಬ್ಬ ತಂದೆಯ ನೆನಪಿನಲ್ಲಿರಬೇಕಾಗಿದೆ.

2. ಭ್ರಮರಿಯ ತರಹ ಜ್ಞಾನದ ರಂಗನ್ನು ಹಾಕುವ ಸೇವೆ ಮಾಡಬೇಕಾಗಿದೆ. ಯುಕ್ತಿಯಿಂದ ಮಹಾರೋಗಿಗಳನ್ನು ನಿರೋಗಿ, ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಬೇಕಾಗಿದೆ.

ವರದಾನ: ಸದಾ ಸಾಕ್ಷಿ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾ ನಿರ್ಲೇಪ ಅವಸ್ಥೆಯ ಅನುಭವ ಮಾಡುವಂತಹ ಸಹಜಯೋಗಿ ಭವ

ಯಾರು ದೇಹದ ಸಂಬಂಧ ಮತ್ತು ದೇಹದಿಂದ ಸಾಕ್ಷಿ ಅರ್ಥಾತ್ ನ್ಯಾರೆ ಇರುತ್ತಾರೆ ಅವರು ಈ ಹಳೆಯ ಪ್ರಪಂಚದಿಂದಲೂ ಸಾಕ್ಷಿಯಾಗಿಬಿಡುತ್ತಾರೆ. ಅವರು ಸಂಪರ್ಕದಲ್ಲಿ ಬರುತ್ತಾ, ನೋಡುತ್ತಿದ್ದರೂ ಸಹಾ ಸದಾ ನ್ಯಾರೆ ಮತ್ತು ಪ್ಯಾರೆ ಇರುತ್ತಾರೆ. ಈ ಸ್ಟೇಜೇ ಸಹಜಯೋಗಿಯ ಅನುಭವ ಮಾಡಿಸುವುದು. ಇದಕ್ಕೇ ಹೇಳಲಾಗುವುದು ಜೊತೆಯಲ್ಲಿದ್ದರೂ ಸಹಾ ನಿರ್ಲೇಪ. ಆತ್ಮ ನಿರ್ಲೇಪ ಅಲ್ಲ ಆದರೆ ಆತ್ಮ-ಅಭಿಮಾನಿ ಸ್ಟೇಜ್ ನಿರ್ಲೇಪ ಅರ್ಥಾತ್ ಮಾಯೆಯ ಲೇಪ ಅಥವಾ ಆಕರ್ಷಣೆಯಿಂದ ದೂರ. ಈ ಅವಸ್ಥೆಯಲ್ಲಿರುವವರು ಮಾಯೆಯ ಯುದ್ಧದಿಂದ ಸುರಕ್ಷಿತರಾಗಿಬಿಡುತ್ತಾರೆ.

ಸ್ಲೋಗನ್: ಶುಭ ಭಾವನೆ ಮತ್ತು ಶುಭಕಾಮನೆಯ ಮುಖಾಂತರ ಸೂಕ್ಷ್ಮ ಸೇವೆ ಮಾಡುವಂತಹವರೇ ಮಹಾನ್ ಆತ್ಮರು.

ಮಾತೇಶ್ವರೀಜೀಯವರ ಮಹಾವಾಕ್ಯ:

1. ‘‘ಪರಮಾತ್ಮ ಒಬ್ಬರಾಗಿದ್ದಾರೆ ಬಾಕಿ ಸರ್ವರು ಮನುಷ್ಯ ಆತ್ಮರಾಗಿದ್ದಾರೆ’’

ಈಗ ಇದಂತು ಇಡೀ ಪ್ರಪಂಚ ತಿಳಿದುಕೊಂಡಿದೆ ಪರಮಾತ್ಮ ಒಬ್ಬರಾಗಿದ್ದಾರೆ ಅವರು ಸರ್ವಶಕ್ತಿವಂತರಾಗಿದ್ದಾರೆ, ಎಲ್ಲವನ್ನು ತಿಳಿದುಕೊಂಡಿರುವವರಾಗಿದ್ದಾರೆ, ನಾವು ಪರಮಾತ್ಮನ ಸಂತಾನರಾಗಿದ್ದೇವೆಂದು ಇಡೀ ಪ್ರಪಂಚವು ಸ್ವತಃ ಹೇಳುತ್ತಿದೆ. ಪರಮಾತ್ಮ ಒಬ್ಬರಾಗಿದ್ದಾರೆ, ಭಲೇ ಯಾವುದೇ ಧರ್ಮದವರಾಗಿರಲಿ ಅವರೂ ಪರಮಾತ್ಮನನ್ನು ಒಪ್ಪುತ್ತಾರೆ. ಅವರು ತಮ್ಮನ್ನು ಪರಮಾತ್ಮನ ಮೂಲಕ ಕಳುಹಿಸಿರುವ ಸಂದೇಶವಾಹಕವೆಂದು ತಿಳಿಯುತ್ತಾರೆ, ಹೀಗೆಯೇ ಸಂದೇಶವನ್ನು ತೆಗೆದುಕೊಂಡು ಬಂದು ತಮ್ಮ ತಮ್ಮ ಧರ್ಮದ ಸ್ಥಾಪನೆ ಮಾಡುತ್ತಾರೆ. ಹೇಗೆ ಗುರುನಾನಕರು ಸಹ ಪರಮಾತ್ಮನ ಇಷ್ಟು ಮಹಿಮೆಯನ್ನು ಮಾಡಿದರು –

ಏಕ್ ಓಂಕಾರ ಸತ್ ನಾಮ (ಒಬ್ಬ ನಿರಾಕರ ಸತ್ಯವಾಗಿದ್ದಾರೆ). ಏಕ್ ಓಂಕಾರನ ಅರ್ಥ ಪರಮಾತ್ಮ ಒಬ್ಬರಾಗಿದ್ದಾರೆಂದಾಗಿದೆ. ಸತ್ ನಾಮನ ಅರ್ಥವಾಗಿದೆ ಅವರು ಹೆಸರು ಸತ್ಯವಾಗಿದೆ ಎಂದು. ಅಂದಮೇಲೆ ಪರಮಾತ್ಮ ನಾಮ ರೂಪವುಳ್ಳವರು ಆಗಿದ್ದಾರೆ, ಅವಿನಾಶಿಯು ಆಗಿದ್ದಾರೆ, ಅಕಾಲಮೂರ್ತರು ಆಗಿದ್ದಾರೆ ಮತ್ತು ಕರ್ತಾ ಪುರುಷರು ಆಗಿದ್ದಾರೆ ಅಂದರೆ ಅವರು ಸ್ವಯಂ ಅಕರ್ತಾನಾಗಿದ್ದರೂ ಹೇಗೆ ಬ್ರಹ್ಮಾ ತನುವಿನ ಮೂಲಕ ಕರ್ತಾ ಪುರುಷರು ಆಗಿದ್ದಾರೆ. ಈಗ ಈ ಎಲ್ಲಾ ಮಹಿಮೆ ಒಬ್ಬ ಪರಮಾತ್ಮನದ್ದಾಗಿದೆ, ಈಗ ಮನುಷ್ಯರು ಇಷ್ಟೆಲ್ಲಾ ತಿಳಿದುಕೊಂಡರೂ ಈಶ್ವರ ಸರ್ವತ್ರವೆಂದು ಹೇಳುತ್ತಾರೆ. ಅಹಂ ಆತ್ಮನೇ ಪರಮಾತ್ಮನಾಗಿದ್ದಾರೆ, ಒಂದುವೇಳೆ ಎಲ್ಲರು ಪರಮಾತ್ಮಾನಾಗಿದ್ದರೆ ಏಕ್ ಓಂಕಾರವೆಂದು ಯಾವ ಪರಮಾತ್ಮನ ಮಹಿಮೆಯನ್ನು ಮಾಡುತ್ತೀರಿ? ಇದೇ ಪರಮಾತ್ಮ ಒಬ್ಬರಾಗಿದ್ದಾರೆಂದು ಸಿದ್ಧವಾಗುತ್ತದೆ.

2. "ಡೈರೆಕ್ಟ್ ಈಶ್ವರೀಯ ಜ್ಞಾನದಿಂದ ಸಫಲತೆ"

ನಮಗೆ ಈ ಅವಿನಾಶಿ ಜ್ಞಾನ ಸಿಗುತ್ತಿದೆ ಅದು ಡೈರೆಕ್ಟ್ ಜ್ಞಾನ ಸಾಗರ ಪರಮಾತ್ಮನಿಂದ ಸಿಗುತ್ತಿದೆ. ಈ ಜ್ಞಾನವನ್ನು ನಾವು ಈಶ್ವರೀಯ ಜ್ಞಾನವೆಂದು ಹೇಳುತ್ತೇವೆ ಏಕೆಂದರೆ ಈ ಜ್ಞಾನದಿಂದ ಮನುಷ್ಯ ಆದಿ ಮಧ್ಯ ಅಂತ್ಯ ಸುಖ ಸಿಗುತ್ತಿದೆ ಅರ್ಥಾತ್ ಜನ್ಮ-ಜನ್ಮಾಂತರ ದುಃಖದ ಬಂಧನದಿಂದ ಮುಕ್ತರಾಗಿಬಿಡುತ್ತಾರೆ. ಕರ್ಮಬಂಧನದಲ್ಲಿ ಬರುವುದಿಲ್ಲ ಅದಕ್ಕೆ ಈ ಜ್ಞಾನವನ್ನು ಅವಿನಾಶಿ ಜ್ಞಾನವೆಂದು ಹೇಳಲಾಗುತ್ತದೆ. ಈಗ ಈ ಜ್ಞಾನ ಕೇವಲ ಒಬ್ಬ ಅವಿನಾಶಿ ಪರಮಪಿತ ಪರಮಾತ್ಮನ ಮೂಲಕ ನಮಗೆ ಪ್ರಾಪ್ತಿಯಾಗುತ್ತದೆ ಏಕೆಂದರೆ ಅವರು ಸ್ವಯಂ ಅವಿನಾಶಿಯಾಗಿದ್ದಾರೆ. ಬಾಕಿ ಎಲ್ಲಾ ಮನುಷ್ಯರು ಜನ್ಮ-ಮರಣದ ಚಕ್ರದಲ್ಲಿ ಬರುವವರಾಗಿದ್ದಾರೆ ಅದಕ್ಕೆ ಅವರಿಂದ ಸಿಗುವ ಜ್ಞಾನ ನಮ್ಮನ್ನು ಕರ್ಮಬಂಧನದಿಂದ ಬಿಡಿಸುವಂತಹದ್ದಲ್ಲ. ಈ ಕಾರಣ ಅವರಿಗೆ ಜ್ಞಾನವನ್ನು ಮಿಥ್ಯ (ಸುಳ್ಳು) ಜ್ಞಾನ ಅಥವಾ ವಿನಾಶಿ ಜ್ಞಾನವೆಂದು ಹೇಳುತ್ತೇವೆ. ಆದರೆ ಈ ದೇವತೆಗಳು ಸದಾ ಅಮರರಾಗಿದ್ದಾರೆ ಏಕೆಂದರೆ ಅವಿನಾಶಿ ಪರಮಾತ್ಮನ ಮೂಲಕ ಈ ಅವಿನಾಶಿ ಜ್ಞಾನ ಪ್ರಾಪ್ತಿ ಮಾಡಿಕೊಂಡಿದ್ದಾರೆ, ಒಂದು ಇದರಲ್ಲಿ ವಿಕಾರಿ ಕಲಿಯುಗೀ ಸಂಗದೋಷದಿಂದ ದೂರವಿರಬೇಕು ಮತ್ತು ಇನ್ನೊಂದು ಅಶುದ್ಧ ಆಹಾರ-ಪಾನೀಯ ಮುಂತಾದಗಳ ಪತ್ಯೆ ಮಾಡಬೇಕು. ಈ ಪತ್ಯೆ ಇಡುವುದರಿಂದಲೇ ಜೀವನ ಸಫಲವಾಗುತ್ತದೆ. ಒಳ್ಳೆಯದು. ಓಂ ಶಾಂತಿ.